## ನ.31ರಂದು ಸಂಸತ್ ಭವನ ಮುತ್ತಿಗೆಗೆ ನಿರ್ಧಾರ

# ಋಣ ಮುಕ್ತ ಕಾಯಿದೆಗಾಗಿ ರೈತ ಮುಕ್ತಿ ಮಹಾ ಪಾದಯಾತ್ರೆ



ಬೆಂಗಳೂರಿನಲ್ಲಿ ನಡೆದ ಕೃಷಿ ಕಾರ್ಮಿಕರ ಸಮಾವೇಶದಲ್ಲಿ ರೈತ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿ, ಪ್ರಕಾಶ್ ಕಮ್ಮರಡಿ ಮತ್ತಿತರರು ಭಾಗವಹಿಸಿದ್ದರು.

**ಬೆಂಗಳೂರು:** "ಡಾ.ಎಂ.ಎಸ್. ಸ್ವಾಮಿನಾಥನ್ ವರದಿಯ ಅನ್ವಯ ಬೆಂಬಲ ಬೆಲೆ ಖಾತರಿ ಕಾನೂನು ಹಾಗೂ ಎಲ್ಲಾ ರೈತರು ಮತ್ತು ಕೃಷಿ ಕೂಲಿಕಾರರಿಗೆ ಬ್ಯಾಂಕ್ ಸಾಲ ಮನ್ನಾ ಖಾತರಿಗೊಳಿಸುವ 'ಋಣ ಮುಕ್ತ ಕಾಯಿದೆ' ಜಾರಿಗೆ ಸಂಸತ್ ವಿಶೇಷ ಅಧಿವೇಶನ ನಡೆಸುವಂತೆ ಒತ್ತಾಯಿಸಿ ನವೆಂಬರ್ 28ರಿಂದ 30ರವರೆಗೆ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ನೇತೃತ್ವದಲ್ಲಿ (ಎಐಕೆಎಸ್‌ಸಿಸಿ) 'ರೈತ ಮುಕ್ತಿ ಮಹಾ ಪಾದಯಾತ್ರೆ' ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ರಾಜ್ಯ ಸಂಚಾಲಕ ಜಿ.ಸಿ.ಬಯ್ಯಾರೆಡ್ಡಿ ಹೇಳಿದರು.

ರಾಜ್ಯ ಮಟ್ಟದ ರೈತರು ಮತ್ತು ಕೃಷಿ ಕಾರ್ಮಿಕರ ಸಮಾವೇಶದಲ್ಲಿ ಮಾತನಾಡಿದ ಅವರು, "ಕೇಂದ್ರ ಸರಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ನ.31ರಂದು ಸಂಸತ್ ಭವನಕ್ಕೆ ಮುತ್ತಿಗೆ ಹಾಕಲಾಗುವುದು." ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ, "ಕೇಂದ್ರ ಸರಕಾರ ಜಾರಿಗೆ ತಂದಿರುವ ಯೋಜನೆಗಳಿಂದಾಗಿ 2022ರ ವೇಳೆಗೆ ದೇಶದ ಎಲ್ಲಾ ರೈತರ ವಾರ್ಷಿಕ ಆದಾಯ ದ್ವಿಗುಣಗೊಳ್ಳಲಿದೆ ಎಂದು ಕೇಂದ್ರ ಕೃಷಿ ಸಚಿವರು ಹೇಳುತ್ತಿದ್ದಾರೆ. ಕೇಂದ್ರ ಸರಕಾರ ರೈತರಿಗೆ ಕೇವಲ ಭರವಸೆಗಳನ್ನು ನೀಡಿದೆಯೇ ಹೊರತು, ಅವುಗಳನ್ನು ಈಡೇರಿಸುವ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಕೇಂದ್ರ ಸರಕಾರದ ರೈತರ ವಿರೋಧಿ ನೀತಿಗಳನ್ನು ಭಾರತೀಯ ಕಿಸಾನ್ ಸಂಘ ಸಹ ವಿರೋಧಿಸಿದೆ," ಎಂದರು.

ಎಐಕೆಎಸ್‌ಸಿಸಿ ಕೇಂದ್ರ ಸಮಿತಿ ಸದಸ್ಯ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, "ಸರಕಾರಿ ನೌಕರರಿಗೆ ವೇತನ ಆಯೋಗ ಸಲ್ಲಿಸುವ ಶಿಫಾರಸಿನ ಆಧಾರದ ಮೇಲೆ ವೇತನ ಹೆಚ್ಚಳ ಮಾಡುತ್ತದೆ. ಇದೇ ಮಾನದಂಡ ರೈತರಿಗೆ ಬೆಂಬಲ ಬೆಲೆ ನೀಡಲು ಅನುಸರಿಸಬೇಕು. ರೈತರಿಗೆ ವೈಜ್ಞಾನಿಕ ಬೆಲೆಗಿಂತ ಯೋಗ್ಯ ಬೆಲೆ ದೊರೆಯುವಂತಾಗಬೇಕು," ಎಂದು ಆಗ್ರಹಿಸಿದರು.

ಕಾರ್ಮಿಕ ಮತ್ತು ರೈತ ಸಂಘಟನೆಗಳ ಮುಖಂಡರಾದ ಪ್ರಸನ್ನಕುಮಾರ್, ಡಾ. ವಾಸು, ದಿವಾಕರನ್, ಬಡಗಲಪುರ ನಾಗೇಂದ್ರ, ಲೋಕೇಶ್, ಬೀರಪ್ಪ, ಅಬ್ಬಣಿ ಶಿವಪ್ಪ ಮತ್ತಿತರರಿದ್ದರು.